ಕಡಲಲೆಗಳ ಮರ್ಮರವನಾಲಿಸುತ್ತ ಭೋಜನಕ್ಕೆ ಕುಳಿತಿದ್ದವರೆಲ್ಲ 'ಸ್ವರ್ಗದಲ್ಲೆಂತು ಬಂತೀ ಚೀತ್ಕಾರ' ಎಂಬಂತೆ ಕಳವಳಿಸಿ ನೋಡುತ್ತಿರಲು, ಆಕೆ ಎದ್ದು ಕೋಣೆಗೆ ಹೋಗಿಬಿಟ್ಟರು. ಏನಾರೂ ಮಾಡಿಕೊಂಡಾಳೆಂದು ಅಂಜಿದ ಆತ ಹಿಂದೆಯೇ ದೌಡಿದ. ನಾವೂ ಅವಸರದಲ್ಲಿ ಊಟ ಮುಗಿಸಿ ಅವರಲ್ಲಿಗೆ ಧಾವಿಸಿದೆವು. ಆಹೊತ್ತಿಗೆ ರುದಾಲಿ ಕಾರ್ಯಕ್ರಮ ಆರಂಭವಾಗಿತ್ತು. 'ನಾನು ಕುಡಿಯಲ್ಲ ಅಂತ ಸುಳ್ಳು ಹೇಳಿ ಮೋಸಾ ಮಾಡ್ದೆಲ್ಲೊ... ನನ್ನ ಗಂಡ ಇಂಥವನು ಅಂತ ಗೊತ್ತಿರಲಿಲ್ಲಪ್ಪಾ. ಅಮ್ಮಾ, ನನ್ನ ಕುಡಿಯೋನಿಗೆ ಕಟ್ಟಿಬಿಟ್ಟೆಲ್ಲೇ, ನಾನ್ಯಾವ ಜಲ್ಮದಲ್ಲಿ ಯಾರಿಗೆ ಕೇಡು ಮಾಡಿದ್ದೆನೊ, ಶಿವನೇ ಇನ್ನು ಹೆಂಗೆ ಸಂಸಾರ ಮಾಡಲಪ್ಪಾ, ಬಂಗಾರದಂತ ನನ ಗಂಡನ್ನ ಕೆಡಿಸಿಬಿಟ್ಟರಪ್ಪಾ ಈ ದುಷ್ಟರೂ...' ಇದು ಆಕೆ ಮಂದಾಕ್ರಾಂತ ಛಂದದಲ್ಲಿ ಹಾಡುತ್ತಿದ್ದ ದುಃಖಗೀತೆಯ ಸಾಹಿತ್ಯವಾಗಿತ್ತು.

ಇಂತಹ ಪಾನಘಜೀತಿಗಳಿಗೆ ಕಾರಣ, ಕೇವಲ ಭಾರತೀಯ ಮಹಿಳೆಯರ ಸಾಂಪ್ರದಾಯಿಕ ಮನೋಭಾವವಲ್ಲ; ನಮ್ಮ ಗಂಡಾಳಿಕೆ ಸಮಾಜದ ಪ್ರತಿಬಿಂಬಗಳಂತಿರುವ ಪಾನಗೋಷ್ಠಿಗಳು ಕೂಡ. ಪಾನಪ್ರಪಂಚದಲ್ಲಿ ಮಹಿಳೆಯರು ಸಾಮಾನ್ಯವಾಗಿ ಸ್ನ್ಯಾಕ್ ಮಾಡಿಕೊಡುವ, ಸಲಾಡ್ ಹೆಚ್ಚಿಕೊಡುವ, ಅರೆನಿದ್ದೆಯಲೆದ್ದು ಉಣಬಡಿಸುವ ವೈಟರುಗಳು. ನಸ್ತ್ರೀ ಪಾನಮರ್ಹತಿ ಎಂದು ನಮ್ಮ ಸಂಸ್ಕೃತಿರಕ್ಷಕರೂ ನಂಬಿದ್ದಾರಷ್ಟೆ. ಎಂತಲೇ ಬಾರುಗಳಿಂದ ಗಂಡಸರನ್ನು ಹೊರಗೆಳೆದು ಚಚ್ಚಿದ ಏಕೈಕ ಪ್ರಕರಣವೂ ಸಿಗುವುದಿಲ್ಲ. ಇಷ್ಟಾದರೂ ಸತಿಪತಿಯೊಂದಾದ ಕುಡಿತವು, ಸಲಿಕೆ, ಗುದ್ದಲಿ, ಪೊರಕೆ ಹಿಡಿದು ಕೆಲಸ ಮಾಡುವ ವರ್ಗಗಳಲ್ಲಿ ಅಬಾಧಿತವಾಗಿದೆ. ನಾನೇ ಕಂಡಂತೆ, ನಮ್ಮ ಕೇರಿಯಲ್ಲಿದ್ದ ತಮಿಳು ಬೆಸ್ತ ದಂಪತಿ ಅಂಗಳದಲ್ಲಿ ರಾತ್ರಿಯೂಟ ಮಾಡುವಾಗ, ಪ್ರೀತಿಯಿಂದಲೇ ಬಂಡೆಗಾತ್ರದ ಬೈಗುಳಗಳನ್ನು ವಿನಿಮಯ ಮಾಡಿಕೊಳ್ಳುತ್ತ ಸಾರಾಯಿ ಗುಟುಕರಿಸುತ್ತಿದ್ದರು. ದಂಪತಿಯಲ್ಲಿ ಒಬ್ಬರೆ ಪಾನಿಯಿದ್ದಲ್ಲಿ ಮಾತ್ರ ಸಂಘರ್ಷ ಖಚಿತವೆಂದರಿಯಬೇಕು. ಶಿವಭಕ್ತನಾದ ಗಂಡ ಪಾದೋದಕ ಪ್ರಸಾದ ಸ್ವೀಕರಿಸಿದರೆ, ಹೆಂಡತಿಯಾದವಳು ಮಾರಿಮಸಣಿ ಭಕ್ತೆಯಾಗಿ ಸುರೆಮಾಂಸ ಸೇವಿಸುತ್ತಿದ್ದ ಚಿತ್ರ ಶರಣರ ವಚನಗಳಲ್ಲಿದೆ. ನಮ್ಮೂರಲ್ಲೂ ಇಂತಹದೊಂದು ವಿಷಮ ದಾಂಪತ್ಯವಿತ್ತು. ಗಾಳೀರಣ್ಣ, ತನ್ನೊಡನೆ ಕಾವಲಿಗೆ ದನಕ್ಕೆ ಬರುತ್ತಿದ್ದ ತಬ್ಬಲಿ ಹುಡುಗಿ ಮಾಳಕ್ಕನನ್ನು ಗಾಂಧರ್ವ ರೀತಿಯಲ್ಲಿ ಕೂಡಿದನು. ಹಸಿಹುಲ್ಲು ತರಲು ಹೋಗಿದ್ದ ಯಾರೊ ಒಬ್ಬ ರತಿಸಂಗದಲ್ಲಿರುವಾಗ ಅವರನ್ನು ಅನಗತ್ಯವಾಗಿ ಕಂಡುಹಿಡಿದನು. ಊರವರಾದರೂ ನಿಷ್ಕಾರಣ ಪಂಚಾಯಿತಿ ಸೇರಿ, ಶಿಕ್ಷಾರೂಪದಲ್ಲಿ ಇಬ್ಬರಿಗೂ ಗುದ್ದೆಕಟ್ಟಿದರು. ಜಾತಿಕಟ್ಟು ಮೀರಿದ ಪ್ರೇಮಿಗಳು ತುರುಮಂದೆಯಲ್ಲಿ ಗುಡ್ಲು ಹಾಕಿಕೊಂಡು ಸುಖವಾಗಿದ್ದರು—ಅದೆಷ್ಟೊ ಕಾಲ. ಅವರಿಗೆ ಮಕ್ಕಳಾಗಲಿಲ್ಲ. 'ಈಕೆಯನ್ನು ಕೂಡಿ ಜಾತ್ಯಸ್ಥರಿಂದ ದೂರವಾದೆ' ಎಂಬ ಚಿಂತೆ ಗಾಳೀರಣ್ಣನಿಗೆ ಕಾಡತೊಡಗಿತು. ಕುಡಿತಕ್ಕೆ ಬಿದ್ದನು. ಅದನ್ನು ಬಿಡಿಸಲು ಹೋದ ಆಕೆ ತಾನೂ ಕಲಿತಳು. ಆತ ಕುಡಿತ ನಿಲ್ಲಿಸಿದರೂ ಆಕೆ ಬಿಡಲಿಲ್ಲ. ಗಾಳೀರಣ್ಣ ಅವಳನ್ನು ಒಂಟಿಯಾಗಿಸಿ ತನ್ನ ಬಂಧುಗಳನ್ನು ಸೇರಿಕೊಂಡ. ಮಾಳಕ್ಕ 'ಸಾಹೆಬ್ ಬೀಬಿ ಔರ್ ಗುಲಾಂ' ಚಿತ್ರದ ನಾಯಕಿಯಂತೆ ಕುಡಿತ ಮುಂದುವರೆಸಿದಳು. ನಾವು ನೋಡುವ ಕಾಲಕ್ಕೆ ಆಕೆ ಮುದುಕಿಯಾಗಿದ್ದಳು. ಕೊನೆಗೊಂದು ದಿನ ತನ್ನ ಕುಟಿಯಲ್ಲಿ ಅನಾಥಳಾಗಿ ತೀರಿಕೊಂಡಳು. ಕುಡಿತ ವ್ಯಸನವಾದರೆ ನಿಲ್ಲುವುದು ಸಾವಿನ ಗುಟುಕಿನ ನಂತರವೇ ಎಂದು ಕಾಣುತ್ತದೆ. 'ಬೆಂಕಿ ದೇಹ ಸುಡುತ್ತದೆ; ಕುಡಿತ ದೇಹದ ಜತೆ ಆತ್ಮವನ್ನೂ ಸುಡುತ್ತದೆ' ಎಂದರು ಗಾಂಧೀಜಿ. ಯಾರಲ್ಲವೆಂದರು? ಆದರೆ ಮಾಳಕ್ಕನನ್ನು